"ಹೌದು, ನೀನು ಹೇಳಿದ್ದಿ, ನಾನು ಒಪ್ಪಿದ್ದೆ. ಆದರೆ ನನ್ನ ಮುಖದ ಮೇಲೆ ನನಗೆ ಪೂರ್ಣ ನಿಯಂತ್ರಣ ಇನ್ನು ಇಲ್ಲ. ಮನಸ್ಸಿಗೆ ಬೇಸರವಾಗಿರುತ್ತ ಮುಖದಲ್ಲಿ ನಗೆ ತರುವುದು ಹೇಗೆ? ನಾನು ನಟನಲ್ಲ, ಲೇಖಕ."

ಕಾಫಿ, ಚಹಾ ಬಂದು ಎದುರು ಕುಳಿತುವು.

"ನಿಮ್ಮನ್ನು ಮದುವೆಗೆ ಕರೆಯಬೇಕು ಎಂದು ಮೂಗಿನ ಮೇಲೆ ಆಸೆಯಿತ್ತು ನನಗೆ. ಆದರೆ ಕರೆಯದೆ ಇರಲು ನಿರ್ಧರಿಸಿದ್ದೇನೆ. ಅಲ್ಲಿ ನಿಮ್ಮ ಮುಖವನ್ನು ಊಹಿಸಲಿಕ್ಕೇ ನನ್ನಿಂದ ಆಗುವುದಿಲ್ಲ."

"ನಿನ್ನ ಮದುವೆಗೆ ನಾನು ಆಮಂತ್ರಿತನಾಗಿ ಬರುವುದುನನ್ನಿಂದಲೂ ಅದನ್ನು ಊಹಿಸುವುದಕ್ಕೆ ಸಾಧ್ಯವಾಗುತ್ತಿಲ್ಲ."

"ನೀವು ಏನೇನೋ ಕನಸುಗಳನ್ನು ಕಾಣುತ್ತಿದ್ದಿರಿ."

"ಇಡೀ ಸಪ್ನ ನನ್ನೆದುರು ಇರುವಾಗ ನನಗೆ ಕನಸುಗಳ ಅಗತ್ಯವಿರಲಿಲ್ಲ."

"ಆದರೂ ನಿಮ್ಮೆಲ್ಲ ಕತೆಗಳಲ್ಲಿ ಕವಿತೆಗಳಲ್ಲಿ ನನ್ನನ್ನು ತಂದಿರಿ. ನಿಮ್ಮಲ್ಲಿ ಈಗ ನನ್ನದೊಂದು ಕೋರಿಕೆ."

"ಏನು ಬೇಕಿದ್ದರೂ ಕೇಳು."

"ಅಂಥಾದ್ದೇನೂ ಕೇಳುವುದಿಲ್ಲ. ಇನ್ನು ನಿಮ್ಮ ಸಾಹಿತ್ಯದಿಂದ ನನ್ನನ್ನು ಬಿಟ್ಟುಬಿಡಬೇಕು. ಅದರಲ್ಲಿ ನಾನು ಇರಬಾರದು. ಈ ಪ್ರೀತಿ ಪ್ರೇಮಗಳ ಬಗ್ಗೆ ಬರೆಯುವುದನ್ನು ನಿಲ್ಲಿಸಿಬಿಡಿ! ಬರೆಯುವುದಕ್ಕೆ ಬೇರೇನೂ ಇಲ್ಲವಾ?"

"ಭಗ್ನಪೇಮ? ಆಶಾಭಂಗ? ನಿರರ್ಥಕತೆ?"

"ಅದು ಯಾವುದೂ ಬೇಡ. ಇನ್ನೂ ಒಂದು ವಿಷಯ."

"ಹೇಳು."

"ಮದುವೆಯಾದ ಒಂದು ವಾರದಲ್ಲಿ ನಾವು ಅಮೆರಿಕೆಗೆ ಹೋಗುತ್ತೇವೆ."

"ಅಮೆರಿಕ?"

"ಹೌದು, ಅಮೆರಿಕ. ನಾನೆಲ್ಲಿದ್ದೇನೆಂದು ಹುಡುಕಿ ಬರಬಾರದು."

"ಅಮೆರಿಕ ನನ್ನ ಕಲ್ಪನೆಗೆ ಮೀರಿದ್ದು. ಭಯಪಡಬೇಡ."

"ನನ್ನಿಂದ ದೂರವಿರಲೆಂದೇ ನೀನು ಅಮೇರಿಕೆಗೆ ಹೋಗುವುದು?"

"ಹಾಗೇನಿಲ್ಲ, ಅಪ್ಪನಿಗೆ ಅಮೆರಿಕನ್ ಅಳಿಯ ಬೇಕಿತ್ತು. ರಮಣ ಅಲ್ಲಿ ಕೆಲಸದಲ್ಲಿದ್ದಾರೆ."

ಸ್ವಲ್ಪ ತಡೆದು ಅಂದಳು: "ಇನ್ನೂ ಒಂದು ವಿಷಯ."

"ನನಗೆ ಫೋನ್ ಮಾಡಬಾರದು, ಪತ್ರ ಬರೆಯಬಾರದು. ಹಿಂದೆ ರಾಸಿ ರಾಸಿ ಪತ್ರ ಬರೆಯುತ್ತಿದ್ದಿರಿ ಬರೇ ಮಾತು ಸಾಲದು ಎಂಬಂತೆ."

"ಅವನ್ನೆಲ್ಲ ಏನು ಮಾಡಿದಿ?"

"ಉರಿಸಿಬಿಟ್ಟೆ."

"ಉರಿಸಿಬಿಟ್ಟೆ?"

"ಹೌದು, ಉರಿಸಿಬಿಟ್ಟೆ. ಬೂದಿಯಾದುವು."

"ಒಂದು ಅಕ್ಷರವೂ ಉಳಿಯದಂತೆ?"

"ಒಂದು ಅಕ್ಷರವೂ ಉಳಿಯದಂತೆ... ಅಯ್ಯೋ ದೇವರೇ!"